

ನನಗೊಬ್ಬ ಉರಿನಾಲಗೆ ಗೆಳೆಯನಿದ್ದಾನೆ. ಅವನು ಕಾಲಜ್ಞಾನಿಯಂತೆ ''ದೋಸ್ತಾ, ಕೆಲವರು ಭಾಷಣ ಮಾಡ್ತಾ ಸತ್ತರು. ಕೆಲವರು ಉಣತಾ ಕಣ್ಮುಚ್ಚಿದರು. ನೀನು ಮಾತ್ರ ರೈಲಲ್ಲೊ ಬಸ್‌ಸ್ಟಾಂಡಲ್ಲೊ ಹೋಗೋದು'' ಎನ್ನುತ್ತಿರುತ್ತಾನೆ. ಆಗೆಲ್ಲ 'ಆಮೆನ್' ಎನ್ನುತ್ತೇನೆ. ದಡದ ಮೇಲೆ ನಿಂತು ಈಜಾಟ ಅಪಾಯ ಎನ್ನುವವರಿಗೆ ಏನು ತಾನೆ ಹೇಳಬಹುದು? ವಾಹನ ರಸ್ತೆ ಇರುವುದೇ ತಿರುಗಾಟಕ್ಕೆ. ಮುಡಿವ ಭೋಗಿಗಳಿಲ್ಲದೆ ಹೋದರೆ ಕಟ್ಟಿದ ಮಾಲೆಗೇನು ಕಿಮ್ಮತ್ತು? ಊರುಮನೆ ಬಿಟ್ಟು ಹೊರಹೋಗಲು ಅಂಜುವ ಸ್ಥಾವರಜೀವಿಗಳ ಕಾಲಜ್ಞಾನಕ್ಕೆ ತಲೆಕೆಡಿಸಿಕೊಳ್ಳುವ ಜರೂರತ್ತಿಲ್ಲ. ಇಷ್ಟಕ್ಕೂ ಪ್ರಿಯವಾದ ಕೆಲಸದಲ್ಲಿ ಮರಣ ಬಂದರೆ ಅದೇ ಮಹಾನವಮಿ, ಬಕ್ರೀದು, ಕ್ರಿಸ್‌ಮಸ್.